**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**– 122/2024 **ಡಿ ಡಬ್ಲ್ಯೂ:1**

**ದಿ:09.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು:ವಾದಿ ಪರ ವಕೀಲರಾದ ಶ್ರೀ ಮುರಾರಿ ರವರಿಂದ.**

ವಾದಿಯರು ನಮ್ಮ ಸ್ಲಮ್ ಬೋರ್ಡ್‌ಗೆ ಮಾಡಿಕೊಟ್ಟಂತಹ ಗೀಫ್ಟ ಡಿಡನ್ನು ಕೆಲವೊಂದು ಷರತ್ತುಗಳಿಗೆ ಒಳಪಟ್ಟು ಕೊಟ್ಟಿದ್ದರು ಎಂದರೆ ಸರಿ. ಸಾಕ್ಷಿಗೆ ನಿಶಾನೆ ಪಿ 2 ರಲ್ಲಿರುವ ಪುಟ 2 ರ ಖಂಡಿಕೆ 2 ರಲ್ಲಿ ನಮೂದಿರುವುದನ್ನು ಓದಿ ಹೇಳಲಾಗಿ ಸಾಕ್ಷಿ ಅದನ್ನು ಒಪ್ಪಿ ಹೌದು ಎನ್ನುತ್ತಾರೆ. ಸದರಿ ಷರತ್ತನ್ನು ನಾವು fulfil ಮಾಡಲು ಆಗಿರುವುದಿಲ್ಲವೆಂದರೆ ಸಾಕ್ಷಿ ಹೌದು ಎನ್ನುತ್ತಾರೆ. ವಾದಿಯರು 04-02-2012 ರಿಂದ 2022 ರವರೆಗೆ ಕಾಯ್ದು ನೋಡಿದರು, ಅದೇ ರೀತಿ ನಿಶಾನೆ ಪಿ 6 ರ ರೀತಿಯ representation ನಮಗೆ ಕಳುಹಿಸುತ್ತಾ ಹೋದರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಾನು ಸದರಿ representation ನ್ನು AEE ರವರಿಗೆ ಕಳುಹಿಸಿದ್ದು ಸದರಿಯವರು ತಾಂತ್ರಿಕ ನಿರ್ದೇಶಕರಿಗೆ ಕಳುಹಿಸಿದ್ದು ತದ ನಂತರ ಅವರು ಸ್ಲಮ್ ಬೋರ್ಡ್‌ಗೆ ರವಾನೆ ಮಾಡಿರುತ್ತಾರೆಂದರೆ ಸರಿ. ತದನಂತರ ಸ್ಲಮ್ ಬೋರ್ಡ್‌ನವರು ಸರ್ಕಾರಕ್ಕೆ ನಾವು ಬರೆಯಬೇಕೆಂದು ದಿ:22-02-2023 ರಂದು resolution ಮಾಡಿ ಸದರಿ ಗೀಫ್ಟ ಡಿಡ್ ನಲ್ಲಿರುವಂತಹ ಕ್ರಮವನ್ನು ತೆಗೆದುಕೊಳ್ಳದೇ ಇರುವ ಕಾರಣ ಅವರ ಜಮೀನನ್ನು ಅವರಿಗೆ ಕೊಡಬೇಕೆಂದು ಮಾಡಿದರು ಎಂದರೆ ಸಾಕ್ಷಿ resolution ಆಗಿದೆ ಎನ್ನುತ್ತಾರೆ. ಸದರಿ resolution ಪ್ರಕಾರ ನಮ್ಮ ಆಯುಕ್ತಕರು ಸರ್ಕಾರಕ್ಕೆ ಪತ್ರ ಬರೆದರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಈಗ ಸರ್ಕಾರದಲ್ಲಿ ಅದು pending ಇದೆ ಎಂದರೆ ಸರಿ. ನಿಶಾನೆ ಪಿ 2 ಇದು conditional gift deed ಆಗಿದ್ದು ಅದರಲ್ಲಿರುವ ಕಂಡಿಷನ್



fulfil ಆಗಿಲ್ಲವೆಂದರೆ ಅದು nonest ಆಗುತ್ತದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ದಾವಾ ಆಸ್ತಿಯಲ್ಲಿ ವಾದಿಯೇ ಪ್ರತ್ಯೇಕ್ಷ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸರ್ಕಾರದಿಂದ ಯಾವುದೇ ಆದೇಶ ಬರದೇ ಇದ್ದ ಕಾರಣ ಅವರೇ ಸ್ವಾಧೀನದಲ್ಲಿ ಇದ್ದಾರೆ ಎನ್ನುತ್ತಾರೆ. ಸದರಿ

ಜಮೀನನ್ನು ಸ್ಲಮ್ ಬೋರ್ಡ್‌ನವರು ವಾಪಸ್ಸು ವಾದಿಗೆ ಕೊಡಬೇಕೆಂದರೆ ಸಾಕ್ಷಿ ಸರ್ಕಾರದಿಂದ ಆದೇಶ ಬಂದ ನಂತರ ಏನು ಮಾಡಬೇಕೆಂದು ತಿಳಿಯುತ್ತದೆ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ